"ತನ್ನ ಮುಖವನ್ನು 'ಆಕೆ'ಯ ಮೈಗೊರೆಸಿದಾಗ, ಹೆತ್ತಬ್ಬೆಯ ಮೈಯ ವಾಸನೆ ಮೂಗಿಗೆ ಬಡಿಯಿತು. ಅದೇ ಪ್ರೀತಿಯ ಗಂಧ. ಮೈಯನ್ನು ನೆಕ್ಕಿನೆಕ್ಕಿ ನನ್ನಮ್ಮನೂ ಮುದ್ದಿಸುತ್ತಿದ್ದಳಲ್ಲ... ಎಂತಹ ಮಮಕಾರ ಅವಳದ್ದು. ಅಮ್ಮನೆಂದರೇನೇ ಹಾಗೆ...' ಮನಸ್ಸಲ್ಲೇ ಅಂದುಕೊಂಡು, ಗುಡಿಯ ಹೊರಗಿನ ಹುಣಸೇಮರದ ಕೆಳಗೆ ನಿಂತು 'ಆಕೆ'ಯು ಮರೆಯಾಗುವವರೆಗೂ ಕಪಿಲೆ ನೋಡುತ್ತಲೇ ಇದ್ದಳು.

ಅಮ್ಮನ ಮೈಯ ವಾಸನೆಯ ಜಾಡು ಹಿಡಿದು 'ಆಕೆ' ಇಟ್ಟ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡುತ್ತಾ ಕಪಿಲೆ 'ಆಕೆ'ಯ ಹಿಂದೆಯೇ ಹೊರಟಳು. ಪ್ರತಿ ಹೆಜ್ಜೆಯ ನವಿರಾದ ಘಮಲನ್ನು ಅನುಭವಿಸಿಕೊಂಡು ಹೋದ ರಭಸದಲ್ಲಿ,'ಭಡ್' ಎಂದು ಕಪಿಲೆಯ ಹಣೆ ಎದುರಿನ ಗೋಡೆಗೆ ಗುದ್ದಿತು.

ಕತ್ತೆತ್ತಿ ನೋಡಿದರೆ, ಅದು 'ಆಕೆ'ಯ ಮನೆಯ ಮಣ್ಣಿನ ಪಾಗಾರ. ಕಪಿಲೆಗೆ ಮುಂದಕ್ಕೆ ಹೋಗಲಾಗಲಿಲ್ಲ. ಅಮ್ಮನ ಪರಿಮಳವನ್ನು ಒಂದೆರಡು ಬಾರಿ ದೀರ್ಘವಾಗಿ ಎಳೆದುಕೊಂಡಳಷ್ಟೆ.

'ಅಮ್ಮಾ... ಅಮ್ಮ' ಎಂದೆರಡು ಬಾರಿ ಕಪಿಲೆ ಕೂಗಿದರೂ ಏನೊಂದು ಉತ್ತರವೂ ಬರಲಿಲ್ಲ. ಬದಲಿಗೆ ಗೋಡೆಯನ್ನು ದಾಟಿ ಬಂದ ದಢೂತಿ ಹೆಂಗಸೊಬ್ಬಳು, 'ಹೆಂಯೀ... ಹೆಂಯೀ... 'ಕೂಗಿ ಕಪಿಲೆಯನ್ನು ಅಲ್ಲಿಂದ ಓಡಿಸಲು, ಬಾಲವನ್ನು ಅಡಿಗೆ ಹಾಕಿ ಒಂದೇಟಿಗೆ ಕಾಲ್ಕಿತ್ತವಳು ಓಡಿ ಬಂದು ನಿಂತದ್ದು ಗುಡಿಯ ಬಳಿಯಿರುವ ಒಂಟಿ ಹುಣಸೇಮರದತ್ತ.

ಮುದ್ದಿನಿಂದ 'ಆಕೆ' ಮಾತನಾಡಿಸುತ್ತಿದ್ದಳಲ್ಲ... ಆ ಪ್ರೀತಿಗೆ ನಾನದೆಷ್ಟು ಆರ್ದ್ರಳಾಗಿ ಹೋದೆನಲ್ಲಾ...' ಎನ್ನುವುದನ್ನು ಕಪಿಲೆ ಮೆಲುಕು ಹಾಕಿದಳು. ದಿನವೂ ಮಧ್ಯಾಹ್ನ 'ಆಕೆ'ಯ ಜೊತೆಯಲ್ಲಿ ಮನೆತನಕ ಹೋಗಿ ಬರುತ್ತಿದ್ದ ಕಪಿಲೆಯ ಬದುಕು ಶಂಕರಿ ಗುಡಿ ಮತ್ತು 'ಆಕೆ'ಯ ನಡುವೆ ಸುತ್ತಿಕೊಳ್ಳುತ್ತಾ ಹೋಯಿತು.

ಹೊತ್ತಲ್ಲದ ಹೊತ್ತಲ್ಲಿ ನಿದ್ರೆಯ ಜೋಂಪು ಆವರಿಸಿದ್ದೇ ಹುಣಸೇಮರ ಹೊದೆಸಿದ ನೆರಳಲ್ಲಿ ಕಪಿಲೆ ನಿದ್ರೆಗೆ ಜಾರಿದವಳ ಮನಸ್ಸು ಒಂದೊಮ್ಮೆ ಬಾಳಿದ ಬದುಕಿನತ್ತ ಹೊರಳಿಕೊಂಡಿತು.

***

'ತಪತಪ ಹೆಜ್ಜೆ ಇಟ್ಟು ಅಮ್ಮನ ಹಾಲನ್ನು ಕುಡಿದಿದ್ದೆ. ಹಾಯಾಗಿ ಹತ್ತು ದಿನ ಅವಳ ಪ್ರೀತಿ ತುಂಬಿದ ಮಡಿಲಲ್ಲಿ ನಲಿದು ಮೈಮನವನ್ನು ಖುಷಿಯಿಂದ ತುಂಬಿಸಿಕೊಂಡಿದ್ದೆ. ಹನ್ನೊಂದನೆಯ ದಿನ ಹಸಿವಿನಿಂದ ಕಂಗೆಟ್ಟಿದ್ದ ನನ್ನ ಬಳಿಗೆ ಬಂದ ಕೆಲಸದವಳು, ಕಟ್ಟಿದ ಹಗ್ಗವನ್ನು ಬಿಚ್ಚಿ ಅಮ್ಮನ ಹತ್ತಿರ ಹಾಲುಣಿಸಲು ಕರೆದೊಯ್ದಳು.

ತುಂಬಿದ ಕೆಚ್ಚಲಿಂದ ಅಮ್ಮ ಹಾಲು ಇಳಿಸುತ್ತಿದ್ದಂತೆಯೇ ಕೆಲಸದವಳು ನನ್ನ ಕುತ್ತಿಗೆಗೆ ಕಟ್ಟಿದ ಹಗ್ಗವನ್ನು ಹಿಡಿದೆಳೆದು ಅಮ್ಮನ ಎದುರಿನ ಕಂಬಕ್ಕೆ ಕಟ್ಟಿದಳು. ತಂಬಿಗೆಯಲ್ಲಿದ್ದ ನೀರಿನಿಂದ ಅಮ್ಮನ ಕೆಚ್ಚಲನ್ನು ತೊಳೆದು, ಅವಳ ಮೊಳೆಗೆ ಬೆಣ್ಣೆ ಸವರಿ, ಹಾಲನ್ನು ಕರೆಯಲು ಮುಂದಾದಳು. ಹಗ್ಗವನ್ನು ಬಿಡಿಸಿಕೊಂಡು ಓಡಿ ಹೋಗಿ ಅಮ್ಮನ ಕೆಚ್ಚಲಿಗೆ ಬಾಯಿ ಹಾಕಲು ತವಕಿಸುತ್ತಿದ್ದೆ. ನನ್ನ ಮನಸನ್ನರಿತ ನನ್ನಮ್ಮ, ಮೈಯನ್ನು ನೆಕ್ಕಿನೆಕ್ಕಿ ಮುದ್ದಿಸಿ ರಮಿಸುತ್ತಿದ್ದಳು. ತಂಬಿಗೆ ತುಂಬಿತು. ಅಮ್ಮನ ಕೆಚ್ಚಲಲ್ಲಿ ನನಗಾಗಿ ಸ್ವಲ್ಪ ಹಾಲನ್ನಿಟ್ಟು, 'ಬಾ... ಬಾ... ಅದೆಂತ ಆಟ ನಿನ್ನದು! ಅಯ್ಯೋ... ಅಯ್ಯೋ... ತುಂಟಿ' ಹೇಳಿ, ಮುದ್ದಿಸಿ ನನ್ನ ಹಗ್ಗವನ್ನು ಕೆಲಸದಾಕೆ ಬಿಡಿಸಿದಳು. ಚಂಗನೆ ಹಾರಿ ಅಮ್ಮನ ಕೆಚ್ಚಲಿಗೆ ಬಾಯಿಟ್ಟು ಹಾಲೆಳೆದೆ. ಸಿಕ್ಕಿದಷ್ಟನ್ನು ಹೀರಿ ಕುಡಿದು, ಅಮ್ಮನೊಟ್ಟಿಗೆ ಖುಷಿಯಿಂದ ಇರುವಾಗಲೇ ಕೆಲಸದವಳು ಬಂದು ಅಮ್ಮನ ಬಳಿಯಿಂದ ನನ್ನನ್ನೆಳೆದು ಪಕ್ಕದ ಗೂಟಕ್ಕೆ ಕಟ್ಟಿ, ಮೇಯಲೆಂದು ಅಮ್ಮನನ್ನು ಹೊರಕ್ಕೆ ಅಟ್ಟಿದಳು. ಮುಚ್ಚಿದ ಹಟ್ಟಿಯ ಬಾಗಿಲ ಹೊರಗಿನಿಂದ ಅಮ್ಮನಿಗೆ ನನ್ನ ನೆನಪಾಗಿ ಕೂಗಿದರೂ ಪ್ರಯೋಜನವಾಗಲಿಲ್ಲ. ಬೇರೆ ದಾರಿ ಕಾಣದೆ ತನ್ನ ಹೊಟ್ಟೆ ತುಂಬಿಸಲು ಅಮ್ಮ ಹೊರಟಳು.

ಅಮ್ಮ ಮತ್ತೊಮ್ಮೆ ಬಸಿರಾದಳು. ಆಗ ನಾನು ಸಾಕಷ್ಟು ದೊಡ್ಡವಳಾಗಿದ್ದೆ. ಮನೆಯೊಡೆಯ ನನ್ನ ಅಂದಚಂದವನ್ನು ಅದ್ಭುತವಾಗಿ ವರ್ಣಿಸಿ ನನ್ನನ್ನು ಮಾರಿಬಿಟ್ಟ. ಅಮ್ಮನನ್ನು ಬಿಟ್ಟು ಹೋಗುವಾಗ ಕಣ್ಣಂಚಿನಲ್ಲಿ ಪಸೆ ಒಡೆಯಿತು. ಮುಂದೆ ಕೈಯಿಂದ ಕೈಗೆ ಬದಲಾಗುತ್ತಲೇ ಹೋದಂತೆ ಕಣ್ಣೀರು ಬತ್ತಿ ಹೋಯಿತು. ಕೊನೆಗೊಮ್ಮೆ ಅಲ್ಲೆಲ್ಲಿಯೂ ನಿಲ್ಲಲಾಗದೆ ಊರನ್ನೇ ಬಿಟ್ಟು, ಹೊಸ ನೆಲೆಯನ್ನು ಹುಡುಕುತ್ತಾ ಹೊರಟೆ' ನಡೆದು ಬಂದ ಹಾದಿಯು ಕಣ್ಣಿಗೆ ಕಟ್ಟಿದಂತೆ ಮೂಡಿ ಬರಲು, ಕಪಿಲೆಗೆ ಥಟ್ಟನೆ ಎಚ್ಚರವಾಯಿತು.

'ಆಕೆ' ಕಪಿಲೆಯ ಮೈ ಸವರುತ್ತಿದ್ದಳು. ಕಂಡ ಕನಸು, ನಡೆದು ಹೋದ ಘಟನೆಗಳ ಪುನರಾವರ್ತನೆ ಎನ್ನುವುದರ ಮನವರಿಕೆ ಕಪಿಲೆಗಾಯಿತು.

'ಶಂಕರಿ ಗುಡಿಯಲ್ಲಿ ನಿನ್ನನ್ನು ಕಾಣಲಿಲ್ಲ! ಭಟ್ರ ಹತ್ತಿರ ಕೇಳಿದರೆ, ಇಂದು ನೀನು ದೇವಳಕ್ಕೆ ಬರಲೇ ಇಲ್ಲವಂತೆ.. ಹೊರಗಡೆ ಬಂದು ನೋಡಿದರೆ, ಮರದ ನೆರಳಡಿಯಲ್ಲಿ ಸುಖನಿದ್ರೆ ನಿನಗೆ...' ಹೇಳುತ್ತಾ, ತುಂಬಾ ಹೊತ್ತು ಮುದ್ದಿಸಿ 'ಆಕೆ' ಕಪಿಲೆಗೆ ಹಣ್ಣನ್ನು ಕೊಟ್ಟಳು.

ಹಾಡನ್ನು ಗುನುಗುತ್ತಾ ತುಸು ಹೊತ್ತು ಕಪಿಲೆಯ ಬಳಿಯೇ ಕುಳಿತುಕೊಂಡ 'ಆಕೆ'ಯ ಕಾಲಿಗೆ ಕಪಿಲೆ ತನ್ನ ತಲೆಯನ್ನು ಉಜ್ಜಿದಳು. ಹೊರಡಲೆಂದು 'ಆಕೆ' ಎದ್ದು ನಿಂತಾಗ ಕಪಿಲೆಯೂ 'ಧಡ್' ಎಂದೆದ್ದು ನಿಂತಳು. ಕಪಿಲೆಯ ಮುಖದಲ್ಲಿ ಗಾಬರಿಯು ಸ್ಪಷ್ಟವಾಗಿ ಗೋಚರಿಸಿದ್ದನ್ನು ಕಂಡ ಆಕೆ 'ಯಾಕೆ ನೀನೆದ್ದದ್ದು?' ಕೇಳಿದಳು.

ಕತ್ತನ್ನು ಅತ್ತಿತ್ತ ಅಲುಗಾಡಿಸುತ್ತ 'ಆಕೆ'ಯ ಮೈಗೆ ಕಪಿಲೆ ತನ್ನ ಮುಖವನ್ನು ತಿಕ್ಕಿದಳು.

'ಅಯ್ಯೋ ಪೆದ್ದು, ನಾಳೆ ಬರ್ತೇನಲ್ಲಾ' ಅಂದಾಗಲೂ ಮತ್ತೆ ಮುಖವನ್ನು 'ಆಕೆ'ಯ ಕೈ ಮೈಗೆ ಕಪಿಲೆ ಒರೆಸುತ್ತಲೇ ಇದ್ದಳು.

'ಆಕೆ'ಗೆ ಏನನಿಸಿತೋ, 'ಅಯ್ಯೋ, ಮುದ್ದು... ಸರಿ, ಬಂದು ಬಿಡು ನನ್ನ ಜೊತೆಗೆ' ಹೇಳಿ, ಕಪಿಲೆಯ ಕೊರಳಿಗೆ ಕೈ ಹಾಕಿದಳು.

ಕಪಿಲೆಯ ಕಣ್ಣುಗಳು ಖುಷಿಯಿಂದ ತೇವಗೊಂಡಿತು. ಕಪಿಲೆಯದ್ದೂ ಆಗಲಿರುವ 'ಆಕೆ'ಯ ಗೂಡಿನತ್ತ ಇಬ್ಬರೂ ಜೊತೆಗೆ ಹೆಜ್ಜೆಯನ್ನು ಹಾಕಿದರು.

ಆ ಮನೆ, ಈ ಮನೆ ಅಂತ ಓಡಾಡುತ್ತಿದ್ದ ಕಪಿಲೆಯು ಕೊನೆಗೂ 'ಆಕೆ'ಯ ಮನೆಯಲ್ಲಿ ನೆಲೆಯನ್ನು ಕಂಡಳು. ಕಪಿಲೆಯ ಹಾಲನ್ನು ನಿತ್ಯವೂ 'ಆಕೆ'ಯೇ ಕರೆಯುತ್ತಿದ್ದಳು. ಮನೆಗೆ ಉಪಯೋಗಿಸಿ ಉಳಿದದ್ದನ್ನು ಮಾರಿ, ತನ್ನ ಕುಟುಂಬದ ನಿರ್ವಹಣೆಯನ್ನೂ 'ಆಕೆ' ಮಾಡುತ್ತಿದ್ದಳು. ಹಾಲನ್ನು ಕರೆವಾಗ ಕಪಿಲೆಯ ಬಳಿ ತನ್ನ ಸುಖ-ದುಃಖಗಳನ್ನು ಕೂಡ ಹಂಚಿಕೊಳ್ಳುತ್ತಿದ್ದಳು. ಮದುವೆಯಾಗಿ 'ಆಕೆ' ಬಂದ ನಂತರ, ಆ ಮನೆಯು ಮನೆಯಂತಾಯ್ತು ಎನ್ನುವುದನ್ನು ಅವರಿವರ, ಊರ ಮಂದಿಯ ಬಾಯಲ್ಲಿ ಕಪಿಲೆ ಕೇಳಿದ್ದಳು.

***

'ನಾನು ಅಲೆಮಾರಿಯಾಗಿದ್ದ ಕಾರಣ ಮೊದ ಮೊದಲು ಎಲ್ಲರೊಡನೆ ಬೆರೆಯಲು ಕಷ್ಟವಾಯಿತು. ಕ್ರಮೇಣ ಹೊಂದಿಕೊಂಡೆ'. ಮೇಯಲು ಹೋದರೆ ನನ್ನನ್ನು ನೋಡಿದವರು, 'ಓ! ಇದು ಅಮ್ಮನ ಮನೆಯದ್ದು. ಎಷ್ಟು ಚಂದ ಸಾಕಿದ್ದಾಳೆ' ಹೇಳಿ, ಮೈಮುಟ್ಟಿ ಸವರುವವರೇ ಅಧಿಕರಿದ್ದರು.

'ನಂಜು ಮನಸಿನವರು 'ಆಕೆ'ಯ ಬಗ್ಗೆ ಮಾತಾಡುವುದನ್ನು ಕೇಳಿದ್ದೇನೆ. ತನ್ನ ಕುಟುಂಬಕ್ಕಾಗಿ ಅದೆಷ್ಟು ಕಷ್ಟಪಡ್ತಾಳೆ ಎನ್ನುವುದು ಬಾಯಿ ಬಾರದ ನನಗೆ ಮತ್ತು ಗುಡಿಯೊಳಗೆ ಮೌನಿಯಾಗಿ ಕುಳಿತ ದೇವಿ ಶಂಕರಿಗೆ ಗೊತ್ತು. ಮಾತು ಬರುವ ಮನುಷ್ಯನ ಮನಸ್ಸನ್ನು ನೆನೆದರೆ ವಾಕರಿಕೆ. ಛೆ! ಮಾಡಬಾರದ್ದನ್ನು ಮಾಡಿ, ಹೇಳಬಾರದ್ದನ್ನು ಹೇಳಿ ಜನ ಹೇಗೆ ಬದುಕುತ್ತಾರೋ? ಇದೆಲ್ಲಾ ನೋಡುವಾಗ ಮಾತು ಬಾರದ ನಾವೇ ಶ್ರೇಷ್ಠರು' ಅಂದುಕೊಂಡ ಕಪಿಲೆಯ ಮನಸ್ಸು ತುಂಬಾ 'ಆಕೆ'ಯೇ ಹೊದೆದುಕೊಂಡು ಬಿಟ್ಟಿದ್ದಳು.

ಒಂಟಿ ಹುಣಸೇಮರದ ಕೆಳಗೆ ಕಾಲ ಕಳೆಯುತ್ತಿದ್ದ ಕಪಿಲೆಗೆ ಆಸರೆಯನ್ನಿತ್ತ 'ಆಕೆ'ಗೆ ಕಪಿಲೆಯಿಂದ ಸಹಾಯವಾಗುವುದು ಕೇವಲ ಅವಳು ಕೊಡುವ ಹಾಲಿನಿಂದ ಮಾತ್ರ. ಹಾಗಾಗಿ ಚೆನ್ನಾಗಿ ಮೇಯಬೇಕು ಎಂದು ಕಪಿಲೆ ನಿರ್ಧರಿಸಿದ್ದಳು.

ಆಕೆಗಂತೂ ಕೈತುಂಬ ಕೆಲಸ. ಮನೆ, ನಲಿವಿನಲ್ಲಿ ನೋವುಗಳನ್ನು ಮುಚ್ಚಿಕೊಂಡು ಬಂದವರನ್ನು, ಇರುವವರನ್ನು, ಒಳಗೆಹೊರಗೆ ಅಂತ ಎಲ್ಲರನ್ನೂ, ಎಲ್ಲವನ್ನೂ ಸಂಭಾಳಿಸಿಕೊಂಡು ಹೋಗುತ್ತಿದ್ದಳು. ಕಾಲವುರುಳಿತು. ಹೊಸತನದ ಗಾಳಿ ಅದಾಗಲೇ ಆಕೆಯ ಮನೆಯೊಳಗೆ ನುಗ್ಗಿತ್ತು. ಹೊಸ ಬಗೆಯಲ್ಲಿ ಆಕೆಯ ಮನೆಯನ್ನು ಕಟ್ಟಲು ಕೆಲಸದವರ ದಂಡೇ ಬಂದು ಸೇರಿತ್ತು. ಒಂದೊಮ್ಮೆ ಮನೆಗೆ ಆಸರೆಯಾಗಿದ್ದವಳು ಇಂದು ಭಾರವಾಗಿಬಿಟ್ಟೆನೆಂದು ಹಾಲನ್ನು ಕರೆಯುವಾಗಲೆಲ್ಲ ಕಪಿಲೆಯ ಬಳಿ ತನ್ನ ನೋವನ್ನು 'ಆಕೆ' ಹಂಚಿಕೊಳ್ಳುತ್ತಿದ್ದಳು.

'ಒಳಗೊಳಗೇ ಬೆಂದು ಬಸವಳಿಯುವುದನ್ನು